# ನಂಟು ನಿಘಂಟು



**ಇದು ನಿಘಂಟುಗಳ ಹಂಗಿಲ್ಲದ
ಮನೆ-ಮನದ ಭಾಷೆ
ತಾಯಿ ಹಾಗೂ ಕಂದಮ್ಮನ
ಕರುಳು-ಹೃದಯದ ಭಾಷೆ**

ಅಮ್ಮ–ಮಗುವಿನ ನಡುವಿನ ಅನುಬಂಧದಲ್ಲಿ ಭಾಷೆಯೊಂದು ರೂಪುಗೊಳ್ಳುತ್ತದೆ. ಅದು ಇಬ್ಬರ ನಡುವೆ ರೂಪುಗೊಂಡು, ಬಹುತೇಕ ಸಂದರ್ಭಗಳಲ್ಲಿ ಅವರಿಬ್ಬರ ನಡುವೆಯೇ ಬಳಕೆಯಾಗುವ ಆಪ್ತಭಾಷೆ. ವ್ಯಾಕರಣದ ಹಂಗು ಮೀರಿದ, ಕೆಲವೊಮ್ಮೆ ಅರ್ಥದ ಹಂಗೂ ಇಲ್ಲದ ‘ಅಮ್ಮ–ಮಗುವಿನ ಭಾಷೆ’ ನಿಘಂಟುಗಳಿಂದ ದೂರವೇ ಉಳಿದಿದ್ದರೂ, ಸಮುದಾಯದ ಭಾವಕೋಶದಲ್ಲಿ ಜೀವಂತವಾದುದು. ಒಲವು, ಕಾಳಜಿ ಹಾಗೂ ಭಾವುಕತೆಯನ್ನೊಳಗೊಂಡ ತಾಯಿ–ಮಗುವಿನ ಕರುಳಿನ ಭಾಷೆಯ ಕುರಿತ ಕೆಲವು ಆರ್ದ್ರ ಆಪ್ತ ಟಿಪ್ಪಣಿಗಳು ಇಲ್ಲಿವೆ. ಕರುಳು ಮಿಡಿದು ನುಡಿವ ಹಾಗೂ ಹೃದಯಗಳ ಓಗೊಡುವಿಕೆಯ ಸಮೀಕರಣದಂತಿರುವ ಈ ಟಿಪ್ಪಣಿಗಳು ಕನ್ನಡದ ಚೆಲುವನ್ನೂ, ಆ ಚೆಲುವಿಗೆ ಒಲವು ಕೂಡಿಕೊಂಡ ಜಾದೂವನ್ನೂ ಮನಗಾಣಿಸುವಂತಿವೆ. ಕನ್ನಡಮಾಸ ಹಾಗೂ ‘ಮಕ್ಕಳ ದಿನಾಚರಣೆ’ಯ ಸಂದರ್ಭದಲ್ಲಿ ‘ಅಮ್ಮ–ಮಗು’ವಿನ ಭಾಷಾಲೋಕದ ಈ ಮುಖಾಮುಖಿ, ಪ್ರತಿ ಓದುಗನೊಳಗಿನ ಭಾವಲೋಕವೊಂದನ್ನು ನೇವರಿಸುವಂತಿದೆ; ಪದಕ್ಕೆ ಪರಿಮಳ ಬಂದ ಗಳಿಗೆಯನ್ನು ಕಾಣಿಸುವಂತಿದೆ.

**। ಸುಮಲತಾ ಎನ್. । ಮಂಜುಶ್ರೀ ಎಂ. ಕಡಕೋಳ
। ಶಶಿಕುಮಾರ್ ಸಿ. । ಕೋಡಿಬೆಟ್ಟು ರಾಜಲಕ್ಷ್ಮಿ**